**◆ ನೀವು ಎರಡು ಬಗೆಯ ಅಭಿವ್ಯಕ್ತಿಯಲ್ಲಿ ತೊಡಗಿಸಿಕೊಂಡವರು. ಕಲಾವಿದ ಜೊತೆಗೆ ಬರಹಗಾರ ಕೂಡ. ಇದು ಎರಡು ದೋಣಿ ಅಥವಾ ಕುದುರೆಯ ಪಯಣ ಅನ್ನಿಸುವುದಿಲ್ಲವೇ?**

ಹೌದು; ಆದರೆ ನನ್ನ ಕಲಾಕೃತಿಗಳು ಅಗತ್ಯ 'ಸಂದರ್ಭ' ಮತ್ತು 'ಅನಿವಾರ್ಯ ಒತ್ತಡ'ಗಳು ಉಂಟಾದಾಗ ಮಾತ್ರ ಸೃಷ್ಟಿಯಾಗುತ್ತವೆ. ನನ್ನ ಬರಹಗಳು ಹಾಗಲ್ಲ. ನನಗಾಗಿಯೇ ಅಲ್ಲದೆ ಇತರ ಕಾರಣಗಳಿಗಾಗಿಯೂ ಸೃಷ್ಟಿಯಾಗುತ್ತವೆ. ಕಲಾಸೃಷ್ಟಿಯ ಸಂವೇದನಾಶೀಲತೆಯನ್ನು ಬರಹಗಳಲ್ಲಿಯೂ ಕಾಣಬಹುದು. ಹೀಗಾಗಿ ನನ್ನ ಬರಹಗಳೂ ನನ್ನ ಅಭಿವ್ಯಕ್ತಿಯ ರಾಜಕಾರಣದ ದೃಷ್ಟಿ–ಧೋರಣೆಗಳಿಗೆ ಪೂರಕವಾಗಿಯೇ ಇರುತ್ತವೆ. ಹಾಗೆಯೇ ನನ್ನ ಮನಸ್ಸಿನ ಆಯ್ಕೆ, ಆಯ್ಕೆಯ ರಾಜಕಾರಣವೂ ಪ್ರಭಾವ ಬೀರಬಲ್ಲದು. 'ಇನ್‌ಸ್ಟಾಲೇಷನ್ ಕಲಾಪ್ರಪಂಚ', 'ವೆಂಕಟಪ್ಪ: ಸಮಕಾಲೀನ ಪುನರವಲೋಕನ', ಮತ್ತು 'ದೃಶ್ಯಧ್ಯಾನ' ಇತ್ಯಾದಿ ಪುಸ್ತಕಗಳನ್ನಿಲ್ಲಿ ನೆನಪು ಮಾಡಿಕೊಳ್ಳಬಹುದು. ನಾನು ಬರೆಯದೆ ಇರಲಾರೆ. ನನ್ನದೇ 'ಚಿತ್ರಕಾವ್ಯ' ಪ್ರಕಾಶನ ಆರಂಭಿಸಿ 'ವೆಂಕಟಪ್ಪ' (1990) ಪುಸ್ತಕ ಪ್ರಕಟಿಸಿದ್ದೆ.

**◆ ಕಲೆಯ ಬರವಣಿಗೆ ಆರಂಭಿಸಿದ ಮೇಲೆ ನಿಮ್ಮೊಳಗಿನ 'ಕಲಾವಿದ' ಹಿಂದೆ ಸರಿದ ಅನ್ನಿಸುವುದಿಲ್ಲವೇ? ಅಥವಾ ನಿಮ್ಮೊಳಗಿನ ಕಲಾವಿಮರ್ಶಕ–ಕಲಾ ಇತಿಹಾಸಕಾರನಿಂದ 'ಕಲಾವಿದ'ನಿಗೆ ಅನ್ಯಾಯ ಆಯಿತೇ?**

ಹಾಗೆ ನೋಡಿದರೆ, ನಾನು ಮೊದಲಿಗೆ ಬರಹಗಾರ; ನಂತರ ಕಲಾವಿದ. 1985ರಲ್ಲಿ ನವಕರ್ನಾಟಕ ಸಾಹಿತ್ಯ ಸ್ಪರ್ಧೆಯಲ್ಲಿ ನನ್ನ 'ಹಂಬಲ' ಕವಿತೆಯನ್ನು ನಿರಂಜನರು ಆಯ್ಕೆ ಮಾಡಿ 'ಪ್ರತಿಭೆ–1985'ರಲ್ಲಿ ಮೊದಲ ಪುಟದಲ್ಲಿ ಪ್ರಕಟಿಸಿದ್ದರು. ನನ್ನ ಅನುಭವದ ಒಳನೋಟಗಳು 1965ರಿಂದಲೂ ತಮಗೆ ಸೂಕ್ತ ಕಂಡ ಅಭಿವ್ಯಕ್ತಿಯ ಪ್ರಕಾರಗಳನ್ನು ಆಯ್ಕೆ ಮಾಡಿಕೊಳ್ಳುತ್ತಿವೆ.

ಗೋಕಾಕ್ ಕನ್ನಡ ಚಳವಳಿಯ ಸಂದರ್ಭದಲ್ಲಿ ಸೂಕ್ತ ಎನ್ನಿಸಿ ಒರಟು ಒರಟಾಗಿ ಕಲೆಯ ಮೂಲಕ ಅಭಿವ್ಯಕ್ತಿಸಲು ಯತ್ನಿಸಿದ್ದೆ; ಬರೆಯುವ ಜೀವಧ್ವನಿ ನನ್ನ ಲೇಖನಿಗೆ ಇರಲಿಲ್ಲ. ಆದರೆ ಆ ಮೊದಲು ನಂತರವೂ ಕಲಾಕೃತಿಗಳ ಸೃಷ್ಟಿಶೀಲತೆಯನ್ನು ನನ್ನ ಅಭಿವ್ಯಕ್ತಿಯು ಆಯ್ಕೆ ಮಾಡಿಕೊಂಡದ್ದುಂಟು; ಕನಸಿನಲ್ಲಿಯೂ ಕಾಡಿದ್ದುಂಟು; ಆದರೆ 1985ರ ದಶಕದಲ್ಲಿ ನಾನು ಹೆಚ್ಚು ಹೆಚ್ಚು ಬರೆಯಲೇಬೇಕಾಗಿ ಬಂದ ದೃಶ್ಯಕಲಾ ಸಂದರ್ಭಗಳು ಸೃಷ್ಟಿಯಾದವು. ಪ್ರಸ್ತುತ ನಾನು ಬರಹಗಾರನಾಗಿಯೇ ನನ್ನನ್ನು ನೋಡಲು ಇಚ್ಛಿಸುತ್ತೇನೆ.

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 1984–85ರ ಸಂದರ್ಭದಲ್ಲಿ ಯುವ ಬರಹಗಾರರ ಮತ್ತು ಕಲಾವಿದರ ಗಿಲ್ಡ್‌ನ ಒಂದು ವರ್ಷಕ್ಕೂ ಹೆಚ್ಚು ಕಾಲ ನಿರಂತರವಾಗಿ ಆಯೋಜನೆಗೊಂಡಿದ್ದ ಪ್ರತಿ ಸೋಮವಾರದ ಕಲಾ ಪ್ರದರ್ಶನಗಳಿಗಾಗಿ ಬರೆಯಲೇ ಬೇಕಾದ ಅನಿವಾರ್ಯ ಸಂದರ್ಭ ಸೃಷ್ಟಿಯಾಯಿತು. ಅದೇ ಸಂದರ್ಭದಲ್ಲಿ ಕಲಾಮೇಳವೂ ನಮ್ಮಲ್ಲಿ ಕಲಾವಿದರೇ ಬರೆಯುವ ಹೊಸ ಪರಂಪರೆಯು ಅಪೂರ್ವವಾಗಿ ಆರಂಭಗೊಳ್ಳಲು ಕಾರಣವಾಯಿತು. ಹಾಗಾಗಿ ಮುಂದಿನ ದಿನಗಳಲ್ಲಿ ದೃಶ್ಯಕಲಾ ಇತಿಹಾಸ ಮತ್ತು ವಿಮರ್ಶೆಗಳಿಗೆ, ಕಲಾಸೃಷ್ಟಿಗಿಂತಲೂ ಹೆಚ್ಚು ಒತ್ತು ನೀಡುತ್ತ ಬಂದೆ.

**◆ ಕನ್ನಡದಲ್ಲಿ ಕಲಾ ಬರವಣಿಗೆ ರೂಪುಗೊಂಡ ಬಗೆಯನ್ನು ಕಲಾ ಇತಿಹಾಸಕಾರನಾಗಿ ಹೇಗೆ ನೋಡಲು ಬಯಸುತ್ತೀರಿ?**

1950ರ ದಶಕದಲ್ಲಿ ಮೈಸೂರಿನಲ್ಲಿ 'ಪ್ರಜಾವಾಣಿ' ಪತ್ರಿಕೆಗೆ ಬರೆಯುತ್ತಿದ್ದ ಬಿ.ವಿ.ಕೆ. ಶಾಸ್ತ್ರಿಯವರು ಬೆಂಗಳೂರಿನಲ್ಲಿ ನೆಲೆಸಿ ಮುಂದುವರೆಸಿದರು. ಶಾಂತಿನಿಕೇತನದಲ್ಲಿ ಕಲಿತು ಬಂದಿದ್ದ ನಾರಾಯಣ